ಪಡೆದಿರುವ ಈ ಆಟೊಗಳು ಕರೆದಲ್ಲಿಗೆ ಬರುವುದಿಲ್ಲ ಎಂದರೆ ಅನ್ಯಾಯವಲ್ಲವೇ? ಯಾರು ಕೇಳುವವರು ಎಂದುಕೊಂಡು ಅವಳು ಮತ್ತೆರಡು ಆಟೊ ನಿಲ್ಲಿಸುವ ಪ್ರಯತ್ನ ಮಾಡಿದಳು. ಸೋತಳು. ಆಗಲೇ ಇನ್ನೊಂದು ಯೋಚನೆಯೂ ಅವಳಿಗೆ ಬಂತು. ತನ್ನ ಕಚೇರಿಯಲ್ಲಿ ಕೆಲಸಕ್ಕೆ ಸೇರುವಾಗ ಟೈಮಿಂಗ್ಸ್ ಸಂಜೆ ಐದು ಗಂಟೆಯ ತನಕ ಎಂದು ಹೇಳಿದ್ದರೂ ಆ ಗೃಧ್ರ ಎಂದೂ ಆ ಸಮಯಕ್ಕೆ ಬಿಟ್ಟವನಲ್ಲ. ನೌಕರಿಯ ಅಗತ್ಯವಿದ್ದ ಕಾರಣ ಆ ಮೇಲೂ ಕೂರುವುದು ಅನಿವಾರ್ಯವಾಗಿದೆ. ಮಿಡ್ಲ್ ಕ್ಲಾಸ್ ಜನರ ಪರಿಸ್ಥಿತಿಯೆ ಹಾಗೆ. ಆಳುವ ಮಂದಿ ಹೆರಿಗೆಯ ರಜಾ ಅಂತ ಆರು ತಿಂಗಳು, ಒಂದು ವರ್ಷ ರಜೆ ಕೊಡುವ ಬದಲು ಸಂಜೆಯ ಐದು ಗಂಟೆಯ ಬಳಿಕ ಹೆಣ್ಣು ಮಕ್ಕಳನ್ನು ಕೂರಿಸಬಾರದು ಅಂತ ಸ್ಟ್ರಿಕ್ಟ್ ಆದ ಕಾನೂನು ಯಾಕೆ ಮಾಡಬಾರದು ಎಂದುಕೊಂಡಳು. ಕಟ್ಟುನಿಟ್ಟಾದ ಕಾನೂನು ಬಂದ ವಿನಾ ಈ ಗೃಧ್ರದಂತಹ ಜನರು ಬಗ್ಗುವವರಲ್ಲ ಎಂದುಕೊಂಡು ಆಟೊ ಹಿಡಿಯುವ ತನ್ನ ಪ್ರಯತ್ನವನ್ನು ಆಕೆ ಮುಂದುವರಿಸಿದಳು.

ಅವಳು ಮತ್ತೊಮ್ಮೆ ವಾಚು ನೋಡಿದಳು. ಗಂಟೆ ಎಂಟಕ್ಕೆ ಹತ್ತಿರವಾಗುತ್ತಿತ್ತು. ಈಗ ಆಟೊ ಸಿಕ್ಕಿದರೂ 'ಡೇ ಕೇರ್'ಗೆ ಮುಟ್ಟುವಾಗ ಎಂಟೂವರೆಯಾಗಿಯೇ ಆಗುತ್ತದೆ. ರಿಂಗ್ ರೋಡಿನಲ್ಲಿ ಇನ್ನೂ ವಾಹನಗಳು ನಿಂತೇ ಇದ್ದುವು. ಅಚೆ ಮಣ್ಣಿನೊಳಗೆ ಸಿಕ್ಕಿಬಿದ್ದ ಅನಾಮಿಕನನ್ನು ಎತ್ತುವ ಕಾರ್ಯ ಸಫಲವಾಗಿದೆಯೋ ಇಲ್ಲವೋ ಎಂದೂ ಅವಳು ಯೋಚಿಸಿದಳು. ಒಮ್ಮೆ ಆಟೊ ಸಿಗುವುದು ಅಲಭ್ಯವೆಂದು ಕಂಡಾಗ ಹತಾಶೆಯಿಂದ ಕೈ ಚೆಲ್ಲಿ ಆ ಕಡೆಯಿಂದ ಬರುತ್ತಿರುವ ಬೈಕ್‌ಗಳೆದುರು ಕೈಯ ಹೆಬ್ಬೆರಳನ್ನು ಎತ್ತಿ ಲಿಫ್ಟ್ ಕೇಳಲು ಉದ್ಯುಕ್ತಳಾದಳು. ಬೈಕ್ ಓಡಿಸುತ್ತಿದ್ದ ಮಂದಿ ಒಬ್ಬೊಬ್ಬರೇ ಇದ್ದುದು ನಿಜ. ಬೆನ್ನ ಹಿಂದೆ ಲ್ಯಾಪ್ ಟಾಪ್ ಇರುವ ಬ್ಯಾಕ್ ಪ್ಯಾಕನ್ನು ಹಾಕಿಕೊಂಡ ಅವರು ಬಹುಶಃ ಸಾಫ್ಟ್‌ವೇರ್ ಎಂಜಿನಿಯರ್‌ಗಳಾಗಿರಬೇಕು. ಮನೆಗೆ ಓಡಲು ಸಂದಿಗೊಂದಿಗಳ ಮೂಲಕ ಬರುವ ಮಂದಿ. ಯಾರೂ ನಿಲ್ಲಿಸಲಿಲ್ಲ. ಏಳನೆಯ ಬ್ಲಾಕಿನಲ್ಲಿ ತುಸು ಕತ್ತಲು ಕವಿದ ಸಮಯ ಒಂಟಿ ಹೆಂಗಸು ಲಿಫ್ಟ್ ಕೇಳುವುದು ಅಸಂಬದ್ಧವೇ ಆಗಿರಬಹುದು. ಮೂವತ್ತರ ವಯಸ್ಸಿನ ಹೆಣ್ಣೊಬ್ಬಳು ಓಡುತ್ತಿರುವ ಬೈಕ್‌ನ ಎದುರು ಎಡಗೈಯ ಹೆಬ್ಬೆರಳೆತ್ತಿ ಲಿಫ್ಟ್ ಕೇಳುವುದು ಅವರಲ್ಲಿ ಏನು ಅಸಹ್ಯ ಭಾವನೆ ಮೂಡಿಸಿತೋ ಏನೋ ಎಂದು ಅವಳಿಗೇ ನಾಚಿಕೆಯಾಯಿತು. ಆದರೆ ನಿರ್ವಾಹವಿರಲಿಲ್ಲ.

ಅದೇ ರಸ್ತೆಯ ಮುಂದೆಲ್ಲೋ ಕೆಲವು ಅಂಗಡಿಗಳ ಢಾಳಾದ ನಿಯಾನ್ ದೀಪಗಳ ಬೆಳಕು ರಸ್ತೆಯ ಮೇಲೆ ಚೆಲ್ಲಿತ್ತು. ಅಲ್ಲಿ 'ಮೇನ್ ಲ್ಯಾಂಡ್ ಚೈನಾ' ಎಂಬ ದೊಡ್ಡ ಹೋಟೆಲೊಂದು ಇದ್ದುದು ಅವಳಿಗೆ ಗೊತ್ತು. ಎಷ್ಟೋ ಸಲ ಅದರೆದುರಿನಿಂದ ಹೋಗುವಾಗ ಕೆಂಪು ಅಕ್ಷರಗಳ ಬೃಹತ್ ಫಲಕವನ್ನು ಅವಳು ನೋಡಿದ್ದಳು. ಕೆಲವು ಆಟೊಗಳು ಅದರೆದುರು ನಿಂತು ಗಿರಾಕಿಗಳಿಗಾಗಿ ಕಾಯುತ್ತಿರುವುದನ್ನು ಆಕೆ ಗಮನಿಸಿದ್ದಳು. ಅದರ ಬಳಿಗೆ ಹೋದರಾದರೂ ಒಂದು ಆಟೊ ಸಿಗಬಹುದೆಂದು ಸೋನೆಮಳೆಯನ್ನು ಲೆಕ್ಕಿಸದೇ ಅದರೆಡೆಗೆ ನಡೆಯ ತೊಡಗಿದಳು.

ನಾಲ್ವತ್ತಮೂರನೆಯ ಅಡ್ಡರಸ್ತೆಯನ್ನು ದಾಟಿದ್ದೇ ಎಡಗಡೆಯಿಂದ ಬಂದ ಆಟೊ ಒಂದಕ್ಕೆ ಆಕೆ ಯಾವ ಭರವಸೆಯೂ ಇಲ್ಲದೆ ಕೈ ತೋರಿಸಿದಳು. ಆಟೊ ನಿಂತಿತು. ಅವಳು ಬಗ್ಗಿ ಡ್ರೈವರ್‌ನತ್ತ ನೋಡಿ, 'ಕೆಂಪೇಗೌಡ ನಗರ ಬರ್ತೀರಾ ಸಾರ್?' ಎಂದು ಕೇಳಿದಳು. ಡ್ರೈವರ್ ಮಾತನಾಡಲಿಲ್ಲ. ಬದಲಾಗಿ ಹೇಳುವ ಮೊದಲೇ ಹಿಂದೆ ಕೈ ಚಾಚಿ ಮೀಟರ್ ಹಾಕಿದ. ಅವಳಿಗೆ